

ಹವಾಮಾನ ವ್ಯತ್ಯಾಸದಿಂದಾಗಿ ಡೆಂಗಿ, ವೈರಾಣು ಜ್ವರ, ಟೈಫಾಯ್ಡ್ ಮುಂತಾದ ಆರೋಗ್ಯ ಸಮಸ್ಯೆ ಜನರನ್ನು ಕಾಡುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ವೈರಾಣು ತೊಂದರೆ ಅಜಮಾಸು ಶೇ.15ರಷ್ಟು ಏರಿಕೆಯಾಗಿದೆ ಎಂಬುದು ಆತಂಕದ ವಿದ್ಯಮಾನ.

■ ಉಮಾ ಅನಂತ್

# ಹೈರಾಣಾಗಿಸುವ ವೈರಾಣು ಸೋಂಕು

ಮಳೆಯಿಂದ ತಾಪಮಾನ ಕುಸಿದಿದೆ. ಈ ಹವಾಮಾನದ ಪರಿಸ್ಥಿತಿ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಪರಿಣಾಮವಾಗಿ ಡೆಂಗಿ, ಟೈಫಾಯ್ಡ್, ವೈರಸ್ ಜ್ವರ ಮಕ್ಕಳೂ ಸೇರಿದಂತೆ ಎಲ್ಲ ವಯೋಮಾನದವರನ್ನೂ ಕಾಡುತ್ತಿದೆ.

ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿ ವೈದ್ಯರ ತಂಡ ಈ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಜೂನ್ ತಿಂಗಳಲ್ಲಿ ಜ್ವರ, ಕೆಮ್ಮು, ನೆಗಡಿ, ತಲೆನೋವಿನಿಂದ ಕೂಡಿದ ವೈರಸ್ ಸೋಂಕು ಶೇ.10ರಿಂದ 15ರಷ್ಟು ಏರಿಕೆಯಾಗಿದೆ ಎಂಬುದನ್ನು ಪತ್ತೆ ಹಚ್ಚಿದ್ದಾರೆ.

'ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿನ ಬದಲಾವಣೆಗಳು ದೇಹದ ಮೇಲೆ ಪರಿಣಾಮ ಬೀರುತ್ತವೆ. ಈ ವರ್ಷ ತಾಪಮಾನದಲ್ಲಿನ ಕುಸಿತವು ಹಿಂದಿನ ವರ್ಷಕ್ಕಿಂತ ಹೆಚ್ಚಾಗಿದ್ದು, ಇದು ದೇಹದ ಪ್ರತಿ ರಕ್ಷಣಾ ವ್ಯವಸ್ಥೆಯ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ವೈರಲ್ ಸೋಂಕುಗಳಲ್ಲದೆ, ಡೆಂಗಿ ಪ್ರಕರಣಗಳ ಹೆಚ್ಚಳಕ್ಕೆ ಇದು ಕಾರಣವಾಗುತ್ತದೆ' ಎಂದು ಹೇಳುತ್ತಾರೆ ನಾರಾಯಣ ಹೆಲ್ತ್ ಸಿಟಿಯಲ್ಲಿ ಇಂಟರ್ನಲ್ ಮೆಡಿಸಿನ್ ಕನ್ಸಲ್ಟೆಂಟ್ ಆಗಿರುವ ಡಾ. ಮಹೇಶ್ ಕುಮಾರ್.

'ದಿನೇ ದಿನೇ ವಿವಿಧ ವೈರಸ್ ಸೋಂಕು ಹೆಚ್ಚುತ್ತಿದೆ. ನಾರಾಯಣ ಆಸ್ಪತ್ರೆ ಒಂದರಲ್ಲೇ ದಿನವೊಂದಕ್ಕೆ ಹಲವು ಅತಿಸಾರ ಪ್ರಕರಣ, ಟೈಫಾಯ್ಡ್, ಡೆಂಗಿ ಹಾಗೂ ಕೋವಿಡ್ ಪಾಸಿಟಿವ್ ರೋಗಿಗಳು ದಾಖಲಾಗುತ್ತಿರುವುದು ಇದಕ್ಕೆ ಸಾಕ್ಷಿ. ಇದರಲ್ಲೂ 30ರಿಂದ 40 ವರ್ಷದೊಳಗಿನ ನಾಲ್ಕೈದು ಮಂದಿ ಕಾಲರಾ ರೋಗಿಗಳು, 25ರಿಂದ 30 ವರ್ಷದೊಳಗಿನ ಐದಾರು ಡೆಂಗಿ ರೋಗಿಗಳು ತೀವ್ರ ಆರೋಗ್ಯ ಸಮಸ್ಯೆಯಿಂದ ದಾಖಲಾಗುತ್ತಿದ್ದಾರೆ. ಹೀಗಾಗಿ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಹಾಗೂ ಸೋಂಕು ತಡೆಗಟ್ಟುವ ಕ್ರಮಗಳ ಬಗ್ಗೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳುವ ಅಗತ್ಯವಿದೆ' ಎಂದು ಹೇಳುತ್ತಾರೆ ಈ ವೈದ್ಯರು.

'ಸಾಮಾನ್ಯವಾಗಿ ಕಡಿಮೆ ಜ್ವರ, ಮೂಗು ಸೋರುವುದು, ತಲೆನೋವು, ಹೊಟ್ಟೆನೋವು ಮುಂತಾದವು ವೈರಲ್ ಸೋಂಕಿನ ಲಕ್ಷಣವಾದರೆ, ಸೌಮ್ಯ ಜ್ವರದಿಂದ ಕೂಡಿದ ದೇಹದ ನೋವು, ಕೀಲು ನೋವು, ಸ್ನಾಯು ನೋವು, ವಾಂತಿ, ವಾಕರಿಕೆಯಂಥ ಲಕ್ಷಣಗಳು